ದಿನಾಂಕಃ 01.03.2025

ಅಸಲು ದಾವಃ 48/2015

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಿಪಿ1 ವಂಶವೃಕ್ಷವನ್ನು ನಾನು ನೋಡಿದ್ದೇನೆ. ಅದು ಸರಿಯಿದೆಯ ಎಂದರೆ ಸಾಕ್ಷಿ ತಪ್ಪಿತೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ1 ಅನ್ನು ತೋರಿಸಿ ಏನು ತಪ್ಪಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಸದರಿ ನಿಪಿ1 ಅನ್ನು ಪರಿಶೀಲಿಸಿ ನೋಡಿ ಸರಿಯಿದೆ ಎಂದು ಉತ್ತರಿಸುತ್ತಾರೆ. ದಾವ ಶೆಡ್ಯೂಲ್ ಸ್ವತ್ತುಗಳು ಮೂಲತಃ ಚಕ್ರದಾಪಶೆಟ್ಟಿ ರವರಿಗೆ ಸೇರಿದವುಗಳು ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ಹಾಗಾದರೆ ದಾವ ಸ್ವತ್ತುಗಳು ಮೂಲತಃ ಯಾರಿಗೆ ಸೇರಿದ ಸ್ವತ್ತುಗಳು ಎಂದರೆ ಸಾಕ್ಷಿ ಕೆಂಪಶೆಟ್ಟಿರವರಿಗೆ ಸೇರಿದವುಗಳು ಎಂದು ಉತ್ತರಿಸುತ್ತಾರೆ. ಕೆಂಪಶೆಟ್ಟಿರವರು ಚಕ್ರದಾಪಶೆಟ್ಟಿರವರ ಮಗ ಎಂದರೆ ಸರಿ. ಕೆಂಪಶೆಟ್ಟಿರವರಿಗೆ 4 ಜನ ಮಕ್ಕಳು ಎಂರದೆ ಸರಿ. ಮೊದಲನೆ ಅವರು ದಾಸ ಶೆಟ್ಟಿ ಎರಡನೆ ಅವರು ಯಾದಿಕೆಂಪನದಾಸೆ ಉರ್ಫ್ ಕೆಂಪಶೆಟ್ಟಿ, ಮೂರನೆ ಅವರು ಮರಿಶೆಟ್ಟಿ ಉರ್ಫ್ ಮರಯ್ಯ ಮತ್ತು ನಾಲ್ಕನೆ ಅವರು ಚಿಕ್ಕಣ್ಣ ಎಂದರೆ ಸರಿ. ಚಿಕ್ಕಣ್ಣಯ್ಯನವರು ಮೂರು ಜನ ಸಹೋದರರನ್ನು ಒಟ್ಟು ಕುಟುಂಬದಲ್ಲಿ ಬಿಟ್ಟು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸಾಕ್ಷಿ ಇಲ್ಲ ಭಾಗ ಮಾಡಿಕೊಂಡು ಪ್ರತ್ಯೇಕವಾಗಿದ್ದರು ಎಂದು ಉತ್ತರಿಸುತ್ತಾರೆ. ಚಿಕ್ಕಣ್ಣಯ್ಯನವರು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದು ಹೇಳುವುದಕ್ಕೆ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಕೊಡಬಹುದ ಎಂದರೆ ಸಾಕ್ಷಿ ನಾನು ಆಗ ಹುಟ್ಟಿರಲೇ ಇಲ್ಲ ಎಂದು ಉತ್ತರಿಸುತ್ತಾರೆ. ವಿಭಾಗ ಮಾಡಿಕೊಂಡಿರುವ ಪತ್ರವನ್ನು ಏನಾದರೂ ನೋಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತುಗಳು ದಾಸಶೆಟ್ಟಿ, ಯಾದಿಕೆಂಪನದಾಸಿ ಉರ್ಫ್ ಕೆಂಪಶೆಟ್ಟಿ ಮತ್ತು ಮರಿಶೆಟ್ಟಿ ಉರ್ಫ್ ಮರಯ್ಯ ಈ ಮೂರು ಜನರಿಗೆ ಮಾತ್ರ ಸೇರಿದ್ದು ಚಿಕ್ಕಣ್ಣಯ್ಯನವರಿಗೆ ಯಾವುದೇ ಭಾಗವಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಯಾದಿಕೆಂಪನದಾಸಿ ಉರ್ಫ್ ಕೆಂಪಶೆಟ್ಟಿರವರ ಕುಟುಂಬಕ್ಕೆ ಸೇರಿದವನು ಎಂದರೆ ಸರಿ. ಅದೇ ರೀತಿ ವಾದಿಯರು ದಾಸಶೆಟ್ಟಿ ಕುಟುಂಬಕ್ಕೆ ಸೇರಿದವನು ಎಂದರೆ ಸಾಕ್ಷಿ ನನಗೆ ಐಡಿಯ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ

ಪ್ರಮಾಣ ಪತ್ರದ ಕಂಡಿಕೆ 2 ರಲ್ಲಿ ವಾದಿಯರು ದಾಸಶೆಟ್ಟಿರವರು ಕುಟುಂಬದವರು ಎಂಬುದನ್ನು ಒಪ್ಪಿದ್ದೀರಿ ಎಂದರೆ ಸಾಕ್ಷಿ ವಂಶವೃಕ್ಷ ಕೊಟ್ಟಿದ್ದರಲ್ಲಿ ಇರುವುದನ್ನುನೋಡಿ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತುಗಳನ್ನು ದಾಸಶೆಟ್ಟಿ ಯಾದಿಕೆಂಪಯ್ಯನದಾಸಿ ಉರ್ಫ್ ಕೆಂಪಶೆಟ್ಟಿ ಮತ್ತು ಮರಿಶೆಟ್ಟಿ ಉರ್ಫ್ ಮರಯ್ಯ ಭಾಗ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದೀರಿ ಆ ವಿಭಾಗ ಪತ್ರವನ್ನು ಹಾಜರು ಪಡಿಸಿದ್ದೀರ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದ ಮೂರು ಸಹೋದರರರು ಯಾವುದೇ ವಿಭಾಗ ಮಾಡಿಕೊಂಡಿಲ್ಲ ಮತ್ತು ಯಾವುದೇ ವಿಭಾಗ ಪತ್ರವೂ ಇಲ್ಲ ನೀವು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ.391/1 ರಲ್ಲಿ ದಾಸಶೆಟ್ಟಿರವರ ಮಗ ದ್ಯಾಪಯ್ಯಶೆಟ್ಟಿ ರವರ ಭಾಗಕ್ಕೆ ಬಂದ 1 ಎಕರೆ 4 ಗುಂಟೆ ಪೈಕಿ 16.8 ಗುಂಟೆ ಹಾಗು 1 ಗುಂಟೆ ಕರಾಬನ್ನು ದಿ.16.01.1964 ರಲ್ಲಿ ನನ್ನ ತಂದೆಗೆ ಮಾರಾಟ ಮಾಡಿರುತ್ತಾರೆಂದು ಹೇಳಿದ್ದೀರಿ, ಆ ಸ್ವತ್ತು ದ್ಯಾಪಯ್ಯಶೆಟ್ಟಿರವರ ಭಾಗಕ್ಕೆ ಬಂದಿಲ್ಲ ಹಾಗಾಗಿ ಅದನ್ನು ಮಾರಾಟ ಮಾಡುವ ಹಕ್ಕು ದ್ಯಾಪಯ್ಯಶೆಟ್ಟಿರವರಿಗೆ ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ವಿಭಾಗ ಆಗಿತ್ತು ನಮಗೆ ರಿಜಿಸ್ಟ್ರೇಷನ್ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ದ್ಯಾಪಯ್ಯಶೆಟ್ಟಿರವರಿಗೆ ಆ ಸ್ವತ್ತು ವಿಭಾಗದಲಿಲ ಅವರಿಗೆ ಬಂದ ಬಾಬ್ತು ಯಾವುದಾದರು ದಾಖಲಾತಿಗಳು ಇವೆಯ ಎಂರದೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದ್ಯಾಪಯ್ಯಶೆಟ್ಟಿರವರ ಹೆಸರಿಗೆ ಯಾವುದೇ ವಿಭಾಗ ಪತ್ರವಾಗಲಿ, ಖಾತೆಯಾಗಲಿ, ಆರ್.ಟಿ.ಸಿಗಳಾಗಲಿ ಬಂದಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ದ್ಯಾಪಯ್ಯಶೆಟ್ಟಿರವರಿಗೆ ಕಾನೂನು ರೀತಿ ಭಾಗ ಬರದೆ ಆ ಸ್ವತ್ತನ್ನು ಮಾರಟ ಮಾಡಲು ಅವರಿಗೆ ಅಧಿಕಾರ ಇಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪುನಃ ಮುಂದುವರಿದು ಹಕ್ಕಿದೆ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದ 2 ನೇ ಪುಟದ ಕೊನೆಯ ಕಂಡಿಕೆಯಲ್ಲಿ ಸರ್ವೆ ನಂ.391/1 ಸಿ ನನ್ನ ತಾತನ ಭಾಗಾಂಶಕ್ಕೆ ಬಂದ 12 ಗುಂಟೆ ಸ್ವತ್ತನ್ನು ನನ್ನ ತಂದೆ ಕೆ.ರಾಮಶೆಟ್ಟಿ ಹಾಗು ಆತನ ಸಹೋದರ ತಮ್ಮ ಜೀವಿತ ಕಾಲದಲ್ಲಿ 12.01.1964 ರಲ್ಲಿ ಮರಿಶೆಟ್ಟಿ ಮಗ ದಾಸಶೆಟ್ಟಿರವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದೀರಿ, ಸದರಿ ಸ್ವತ್ತು ನಿಮ್ಮ ತಾತನ ಭಾಗಾಂಶಕ್ಕೆ ಬಂದ ಬಗ್ಗೆ ವಿಭಾಗ ಪತ್ರವಾಗಲಿ, ಮ್ಯುಟೇಷನ್ ಆಗಲಿ, ಆರ್.ಟಿ.ಸಿಯಾಗಲಿ ಇತರೆ ದಾಖಲಾತಿಗಳನ್ನಾಗಲಿ ನೋಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮೇಲೆ ಹೇಳಿದ ಸ್ವತ್ತನ್ನು ನಿಮ್ಮ ತಂದೆಗೆ ವಿಭಾಗದಲ್ಲಿ ಬರದ ಹೊರತು ಮಾರಾಟ ಮಾಡುವ ಹಕ್ಕು ಇಲ್ಲ ಎಂದರೆ ಸಾಕ್ಷಿ ಭಾಗದಲ್ಲಿ ಬಂದಿದೆ

ಎಂದು ಉತ್ತರಿಸುತ್ತಾರೆ. ಆ ಬಗ್ಗೆ ದಾಖಲಾತಿ ಇದೆಯ ಎಂದರೆ ಸಾಕ್ಷಿ ಹೌದು ಇದೆ ಎಂದು ಉತ್ತರಿಸುತ್ತಾರೆ. ಏನು ದಾಖಲಾತಿಗಳು ಇವೆ ಎಂದರೆ ಸಾಕ್ಷಿ ಆರ್.ಟಿ.ಸಿ ಮತ್ತು ಎಂ.ಆರ್ ಇದೆ ಎಂದು ಉತ್ತರಿಸುತ್ತಾರೆ. ಅವುಗಳನ್ನು ನ್ಯಾಯಾಲಯಕ್ಕೆ ಕೊಡಬಹುದ ಎಂದರೆ ಸಾಕ್ಷಿ 1964 ರಿಂದ ಇಚೆಗೆ ನಮ್ಮ ತಂದೆಯ ಹೆಸರಿನಲ್ಲಿ ಇರುವ ದಾಖಲಾತಿಗಳನ್ನು ಕೊಡುತ್ತೇನೆ ಅದಕ್ಕಿಂತ ಹಿಂದಿನ ದಾಖಲಾತಿಗಳ ಬಗ್ಗೆ ನನಗೆ ಐಡಿಯ ಇಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತುಗಳು ಈ ವರೆಗು ವಿಭಾಗವಾಗಿಯೇ ಇಲ್ಲ ಒಟ್ಟು ಕುಟುಂಬದಲ್ಲಿಯೇ ಇರುತ್ತವೆ ಎಂದರೆ ಸಾಕ್ಷಿ ಅಣ್ಣ ತಮ್ಮಂದಿರು ಇದ್ದಾಗಲೆ ವಿಭಾಗ ಆಗಿದೆ ಎಂದು ಉತ್ತರಿಸುತ್ತಾರೆ. ವಿಭಾಗ ಆಗಿರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ ನೀವು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ನಮ್ಮ ತಂದೆಗೆ ಆಗಿರುವ ರಿಜಿಸ್ಟ್ರೇಷನ್ ಪತ್ರಗಳನ್ನು ನೋಡಿ ವಿಭಾಗ ಆಗಿದೆ ಎಂದು ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತುಗಳು ಇವತ್ತಿಗೂ ಒಟ್ಟು ಕುಟಂಬದ ಸ್ವತ್ತುಗಳೇ ಆಗಿವೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ವಾದಿಗು ದಾವ ಸ್ವತ್ತುಗಳಲಿಲ್ಲ ಮೂರನೇ ಒಂದು ಭಾಗ ಕೋರಿ ದಾವೆ ಹೂಡಿದ್ದಾರೆ ಅವರ ಭಾಗವನ್ನು ಕೊಡಲು ನಿರಾಕರಿಸಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಪಾಟೀ ಸವಾಲುಃ 33 ನೇ ಪ್ರತಿವಾದಿ ವಕೀಲರ ವಿನಂತಿಯ ಮೇರೆಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.